# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583105

**VIJAYANAGARA SRI KRISHNADEVARAYA UNIVERSITY**

**"Jnana Sagara" Campus, Vinayaka Nagara, Contonment, Ballari - 583105**

ಪ್ರೊ. ಶಶಿಕಾಂತ ಎಸ್. ಉಡಿಕೇರಿ

ಕುಲಸಚಿವರು (ಮೌಲ್ಯಮಾಪನ)

ದೂರವಾಣಿ : 08392-241011


ಸಂಖ್ಯೆ. ವಿಶ್ರೀಕೃವಿಬ/ಪರೀಕ್ಷಾ/ಬಿ.ಇಡಿ./ಪ್ರಾ.ಪ.ವೇ/2021-22/1706 ದಿನಾಂಕ: 15-02-2022

## ಅಧಿಸೂಚನೆ

**ವಿಷಯ : ಬಿ.ಇಡಿ. ಭಾಗ-2, 4ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿ.**

**ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 14-02-2022**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಅಧೀನದಲ್ಲಿನ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಪ್ರಸ್ತುತ 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಬಿ.ಇಡಿ. ಭಾಗ-2 ಪ್ರಾಯೋಗಿಕ ಪರೀಕ್ಷೆಗಳನ್ನು ಕ್ಲಸ್ಟರ್ ಮಾದರಿಯಲ್ಲಿ ಆಯ್ದ ಒಂಭತ್ತು ಪರೀಕ್ಷಾ ಕೇಂದ್ರಗಳಲ್ಲಿ ದಿನಾಂಕ : 21-02-2022 ರಿಂದ 28-02-2022 ರವರೆಗೆ ನಡೆಸಲು ನಿರ್ಧರಿಸಲಾಗಿದೆ. ವಿಷಯವಾರು ವೇಳಾಪಟ್ಟಿಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

**ಪ್ರಾಯೋಗಿಕ ಪರೀಕ್ಷಾ ಕೇಂದ್ರ (ಕ್ಲಸ್ಟರ್ ಮಾದರಿ) ದ ಹಾಗೂ ಸಂಬಂಧಿತ ಮಹಾವಿದ್ಯಾಲಯಗಳ ವಿವರಗಳು**

| ಕ್ರ.ಸಂ | ಪರೀಕ್ಷಾ ಕೇಂದ್ರ | ಕ್ರ.ಸಂ | ಕಾಲೇಜ್ ಕೋಡ್ | ಸಂಬಂಧಿತ ಮಹಾವಿದ್ಯಾಲಯಗಳು |
|---|---|---|---|---|
| 01. | ಕೊಟ್ಟೂರುಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ | 01 | 1018 | ಕೊಟ್ಟೂರುಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ |
| | | 02 | 1022 | ರಾಯಲ್ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ |
| | | 03 | 1030 | ಶರಭೇಶ್ವರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ |
| 02 | ಸತ್ಯಂ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ | 01 | 1020 | ಸತ್ಯಂ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ |
| | | 02 | 1021 | ಸೋನಿಯಾ ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ |
| 03 | ಎಸ್.ಬಿ.ಬಿ.ಎನ್.ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ | 01 | 1117 | ಎಸ್.ಬಿ.ಬಿ.ಎನ್.ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ |
| | | 02 | 1120 | ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ |
| 04 | ಜೆ.ಎಸ್.ಎಸ್.ಶಿಕ್ಷಣ ಮಹಾವಿದ್ಯಾಲಯ, ಹೂವಿನಹಡಗಲಿ | 01 | 1162 | ಜೆ.ಎಸ್.ಎಸ್.ಶಿಕ್ಷಣ ಮಹಾವಿದ್ಯಾಲಯ, ಹೂವಿನಹಡಗಲಿ |
| | | 02 | 1278 | ತುಂಗಭದ್ರಾ ಶಿಕ್ಷಣ ಮಹಾವಿದ್ಯಾಲಯ, ಕೊಟ್ಟೂರು. |
| 05 | ಜ್ಞಾನಭಾರತಿ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ | 01 | 1311 | ಶ್ರೀ ಲಕ್ಷ್ಮಿ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ |
| | | 02 | 1312 | ಜ್ಞಾನಭಾರತಿ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ |

| | | | | |
|---|---|---|---|---|
| 06 | ಜ್ಞಾನಮಂಟಪ ಶಿಕ್ಷಣ ಮಹಾವಿದ್ಯಾಲಯ, ಗುಂಡಿನಹೊಳೆ, ಕೂಡ್ಲಿಗಿ | 01 | 1314 | ಜ್ಞಾನಮಂಟಪ ಶಿಕ್ಷಣ ಮಹಾವಿದ್ಯಾಲಯ, ಗುಂಡಿನಹೊಳೆ, ಕೂಡ್ಲಿಗಿ |
| | | 02 | 1403 | ಶ್ರೀಮತಿ ಲಕ್ಷ್ಮಿ ಎಸ್.ನಾನಾವಟೆ ಶಿಕ್ಷಣ ಮಹಾವಿದ್ಯಾಲಯ, ಸಂಡೂರು. |
| 07 | ಗವಿಸಿದ್ದೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೊಪ್ಪಳ | 01 | 2018 | ರಾಜೀವ್‌ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಕೊಪ್ಪಳ |
| | | 02 | 2019 | ಗವಿಸಿದ್ದೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೊಪ್ಪಳ |
| | | 03 | 2405 | ಫಿನಿಕ್ಸ್ ಶಿಕ್ಷಣ ಮಹಾವಿದ್ಯಾಲಯ, ಕೊಪ್ಪಳ |
| 08 | ಟಿ.ಎಂ.ಎ.ಇ ಶಿಕ್ಷಣ ಮಹಾವಿದ್ಯಾಲಯ, ಗಂಗಾವತಿ | 01 | 2164 | ಟಿ.ಎಂ.ಎ.ಇ ಶಿಕ್ಷಣ ಮಹಾವಿದ್ಯಾಲಯ, ಗಂಗಾವತಿ |
| | | 02 | 2406 | ಎಸ್.ಎಂ.ಟಿ.ಎಸ್.ಶಿಕ್ಷಣ ಮಹಾವಿದ್ಯಾಲಯ, ಮರಳಿ |
| 09 | ವಿಜಯಚಂದ್ರಶೇಖರ ಶಿಕ್ಷಣ ಮಹಾವಿದ್ಯಾಲಯ, ಕುಷ್ಟಗಿ. | 01 | 2361 | ವಿಜಯಚಂದ್ರಶೇಖರ ಶಿಕ್ಷಣ ಮಹಾವಿದ್ಯಾಲಯ, ಕುಷ್ಟಗಿ. |
| | | 02 | 2402 | ಎಸ್.ಎ.ನಿಂಗೋಜಿ ಶಿಕ್ಷಣ ಮಹಾವಿದ್ಯಾಲಯ, ಯಲಬುರ್ಗಾ. |

**ಪ್ರಾಯೋಗಿಕ ಪರೀಕ್ಷಾ ಕೇಂದ್ರದ (ಕ್ಲಸ್ಟರ್), ಪ್ರಾಚಾರ್ಯರುಗಳಿಗೆ, ವೇಳಾಪಟ್ಟಿ ಪ್ರಕಾರ ಸೂಕ್ತ ಸಿದ್ಧತೆಗಳನ್ನು ಮಾಡಿಕೊಂಡು ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿಕೊಡಲು ನಿರ್ದೇಶಿಸಲಾಗಿದೆ.**

ಕೋವಿಡ್-19 ನಿಯಮಾವಳಿಗಳ ಪ್ರಕಾರ ಈ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಕೋವಿಡ್-19 ಪರೀಕ್ಷೆಯನ್ನು ಪರೀಕ್ಷಾ ದಿನಾಂಕ ಪ್ರಾರಂಭದ 3 ದಿನ ಮುಂಚಿತವಾಗಿ ಮಾಡಿಸಿ, ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಪರೀಕ್ಷಾ ದಿನದಂದು ಸಲ್ಲಿಸಲು ಸೂಚಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು, ಮಾಸ್ಕ್ ಧರಿಸುವುದು, ಸ್ಯಾನಿಟೈಜರ್ ಬಳಸುವುದು ವಿದ್ಯಾರ್ಥಿಗಳಿಗೆ ಹಾಗೂ ಪರೀಕ್ಷಾ ಸಿಬ್ಬಂದಿಗಳಿಗೆ ಕಡ್ಡಾಯವಾಗಿರುತ್ತದೆ. ಪರೀಕ್ಷಾ ಕೊಠಡಿಗಳನ್ನು ಸ್ಯಾನಿಟೈಜ್ ಮಾಡಿ ಶುದ್ಧೀಕರಿಸಲು ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದೆ.

**## ಬಿ.ಎಡ್.ಪದವಿಯ 4ನೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು.**

1) ಪ್ರಾಯೋಗಿಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿಶ್ವವಿದ್ಯಾಲಯದ ಪ್ರವೇಶ ಪತ್ರ (Hall Ticket) ಮತ್ತು ಮಹಾವಿದ್ಯಾಲಯದ ಗುರುತಿನ ಚೀಟಿ (ID CARD) ಹಾಗೂ ಕಾಲೇಜಿನ ಸಮವಸ್ತ್ರದೊಂದಿಗೆ ಸಂಬಂಧಪಟ್ಟ ಬೋಧನಾ ವಿಷಯದ ಪಾಠಯೋಜನೆಗಳು ಒಂದು ವಿಷಯಕ್ಕೆ 02 ರಂತೆ (PSS-1 ಕ್ಕೆ ಸಂಬಂಧಿಸಿದ ಪಾಠಯೋಜನೆಗಳು – 02 ಮತ್ತು PSS-2 ಕ್ಕೆ ಸಂಬಂಧಿಸಿದ ಪಾಠಯೋಜನೆ – 02 ) ಒಟ್ಟು 04 ಪಾಠ ಯೋಜನೆಗಳನ್ನು ಸಂಬಂಧಿಸಿದ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗುವುದು ಹಾಗೂ ಬೆಳಗ್ಗೆ 09:30 ಕ್ಕೆ ವರದಿ ಮಾಡಿಕೊಂಡು, ಪರೀಕ್ಷಾ ಕೇಂದ್ರದಲ್ಲಿನ ಪರೀಕ್ಷಕರಿಗೆ ತಮ್ಮ ಬೋಧನಾ ವಿಷಯದ 02 ಪಾಠ ಯೋಜನೆಗಳನ್ನು ನೀಡಬೇಕು.

2) ಸದರಿ ಪಾಠಯೋಜನೆಗಳಲ್ಲಿ ಮುಖಪುಟದಲ್ಲಿ ನೋಂದಣಿ ಸಂಖ್ಯೆ, ಮಹಾವಿದ್ಯಾಲಯದ ಕೋಡ್ ಮತ್ತು ಬೋಧನಾ ವಿಷಯವನ್ನು ಮಾತ್ರ ನಮೂದಿಸಬೇಕು. ಪಾಠಯೋಜನೆಯಲ್ಲಿ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಹೊರತುಪಡಿಸಿ ಯಾವುದೇ ರೀತಿಯ ಗುರುತಿನ ಚಿಹ್ನೆಗಳು ಇರಕೂಡದು.

3) ಪ್ರತಿ ಬೋಧನಾ ವಿಷಯದ ಪ್ರಾಯೋಗಿಕ ಪರೀಕ್ಷೆಯ ಪಾಠದ ಸಮಯವನ್ನು ಕೋವಿಡ್-19 ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು 40 ನಿಮಿಷಗಳಿಗೆ ನಿಗಧಿಪಡಿಸಿದೆ.

4) ಪ್ರಾಯೋಗಿಕ ಪರೀಕ್ಷೆಗಳು ಪ್ರತಿದಿನ ಬೆಳಗ್ಗೆ 10:00 ರಿಂದ ನಿಯೋಜಿತ ಪರೀಕ್ಷಾ ಕೇಂದ್ರದಲ್ಲಿ ಒಂದು ಬ್ಲಾಕ್ ಅಥವಾ ಬೋರ್ಡನಲ್ಲಿ 40 ನಿಮಿಷಕ್ಕೆ ಒಬ್ಬ ವಿದ್ಯಾರ್ಥಿಯಂತೆ ವಿದ್ಯಾರ್ಥಿಗಳ ಪಾಠಯೋಜನೆಯ ಬೋಧನೆ ಮುಗಿಯುವ ತನಕ ಸಮಯವನ್ನು ನಿಗದಿಪಡಿಸಲಾಗಿದೆ. ಮಧ್ಯಾಹ್ನ 01:30 ಕ್ಕೆ ಊಟ/ಉಪಹಾರಕ್ಕೆ ಬಿಡುವು ಮಾಡಿಕೊಡಲಾಗಿದೆ.

5) ಸದರಿ ವಿದ್ಯಾರ್ಥಿಗಳು ತಮ್ಮ ಪಾಠದ ಅವಧಿಯ ಮುಕ್ತಾಯದ ನಂತರ ಪರೀಕ್ಷಾ ಕೇಂದ್ರದ ಮುಖ್ಯಸ್ಥರು/ಪರೀಕ್ಷಕರು/ಮೇಲ್ವಿಚಾರಕರು ಅನುಮತಿ ನೀಡಿದ ನಂತರವೇ ಪರೀಕ್ಷಾ ಕೇಂದ್ರವನ್ನು ಬಿಡುವ ಷರತ್ತಿಗೆ ಒಳಪಟ್ಟಿದೆ.

6) ಕೋವಿಡ್-19 ಹಿನ್ನೆಲೆಯಲ್ಲಿ ಆಯಾ ಪರೀಕ್ಷಾ ಕೇಂದ್ರದಲ್ಲಿ ನಿಯೋಜಿಸಿದ ಬಿ.ಎಡ್. ವಿದ್ಯಾರ್ಥಿಗಳೇ ಶಾಲಾ ಮಕ್ಕಳಂತೆ ತಿಳಿದು ಬೋಧನೆಯಲ್ಲಿ ಭಾಗವಹಿಸುವುದು.

7) ಸದರಿ ಪ್ರಾಯೋಗಿಕ ಪರೀಕ್ಷೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು, ಮಹಾವಿದ್ಯಾಲಯದ ಅಥವಾ ಪರೀಕ್ಷಾ ಕೇಂದ್ರದ ಸಿಬ್ಬಂದಿಗಳು ಕಡ್ಡಾಯವಾಗಿ ಕರ್ನಾಟಕ ಸರಕಾರವು ನಿಗದಿಪಡಿಸಿದ ಕೋವಿಡ್ – 19 ಮುಂಜಾಗ್ರತಾ ಕ್ರಮಗಳನ್ನು ಪಾಲಿಸಲು ಸೂಚಿಸಿದೆ.

8) ವಿದ್ಯಾರ್ಥಿಗಳು, ಪರೀಕ್ಷಾ ಕರ್ತವ್ಯ ನಿರತ ಸಿಬ್ಬಂದಿ ಹಾಗೂ ಕೊಠಡಿ ಮೇಲ್ವಿಚಾರಕರು ಥರ್ಮಲ್ ಸ್ಕ್ರೀನಿಂಗ್ ಗೆ ಒಳಪಡುವುದು ಕಡ್ಡಾಯವಾಗಿದೆ.

9) ವಿದ್ಯಾರ್ಥಿಗಳು, ಪರೀಕ್ಷಾ ಕರ್ತವ್ಯ ನಿರತ ಸಿಬ್ಬಂದಿ ಹಾಗೂ ಕೊಠಡಿ ಮೇಲ್ವಿಚಾರಕರು ಮಾಸ್ಕ್ ಧರಿಸುವುದು ಕಡ್ಡಾಯವಾಗಿದೆ.

10) ತಮ್ಮ ಮಹಾವಿದ್ಯಾಲಯಗಳ/ವಿಭಾಗಗಳ ಅಧಿಕೃತ ಇ-ಮೇಲ್ ವಿಳಾಸ ಕಡ್ಡಾಯವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು.

11) ವಿದ್ಯುತ್ ಉಪಕರಣಗಳಾದ ಜನರೇಟರ್/ಇನ್‌ವರ್ಟರ್, ಝುರಾಕ್ಸ್ ಯಂತ್ರ, ಇಂಟರ್‌ನೆಟ್ ಮತ್ತು ಕಂಪ್ಯೂಟರ್ ಪ್ರಿಂಟರ್‌ಗಳ ವ್ಯವಸ್ಥೆ ಮಾಡಿಕೊಳ್ಳುವುದು.

12) ಪ್ರಾಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕ್ಲರ್ಕ್/ಕಂಪ್ಯೂಟರ್ ಆಪರೇಟರ್ ಹಾಗೂ ಅನುಚರರನ್ನು ಪ್ರತಿ ದಿನಕ್ಕೆ ಒಬ್ಬೊಬ್ಬರಂತೆ ಮಾತ್ರ ನೇಮಿಸಿಕೊಳ್ಳಬಹುದಾಗಿದೆ.

ಕುಲಸಚಿವರು(ಮೌಲ್ಯಮಾಪನ)
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

**ಪ್ರತಿಗಳನ್ನು :**

1) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃವಿಶ್ವವಿದ್ಯಾಲಯ, ಬಳ್ಳಾರಿ.
2) ಕುಲಸಚಿವರು, ಆಡಳಿತ ವಿಭಾಗ, ವಿಶ್ರೀಕೃವಿಶ್ವವಿದ್ಯಾಲಯ, ಬಳ್ಳಾರಿ.
3) ಬಿ.ಇಡಿ., ಬಿ.ಒ.ಇ., ಅಧ್ಯಕ್ಷರು, ಮತ್ತು ಸದಸ್ಯರು
4) ಕಛೇರಿ ಪ್ರತಿ.